ಮಾಗಡಿ ಪಟ್ಟಣದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗೆ ಕಟ್ಟಡ ಹಾಗೂ ಸಿಬ್ಬಂದಿ ಕೊರತೆ

834 (812) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ ಮಾಗಡಿ ಪಟ್ಟಣದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಇದರ ರೂಪುರೇಷೆಗಳೇನು;

ಆ) ಈ ಕೈಗಾರಿಕಾ ತರಬೇತಿ ಸಂಸ್ಥೆಗೆ ಸಂಪೂರ್ಣವಾದ ಸ್ವಂತ ಕಟ್ಟಡವಿದೆಯೇ;

ಇ) ಇಲ್ಲದಿದ್ದಲ್ಲಿ, ಈ ಸ್ವಂತ ಕಟ್ಟಡ ನಿರ್ಮಾಣಕ್ಕೆ ಇಲ್ಲಿನವರೆವಿಗೂ ತೆಗೆದುಕೊಂಡಿರುವ ಕ್ರಮಗಳಾವುವು;

ಈ) ಎಷ್ಟು ದಿನಗಳಲ್ಲಿ ಈ (ಸಂಪೂರ್ಣವಾದ) ಕಟ್ಟಡದ ವ್ಯವಸ್ಥೆ ಮಾಡಲಾಗುವುದು;

ಉ) ಈ ಕೈಗಾರಿಕಾ ತರಬೇತಿ ಸಂಸ್ಥೆಗೆ ಅವಶ್ಯ ಮಂಜೂರಾತಿಯ ಶಿಕ್ಷಕರು ಹಾಗೂ ಸಿಬ್ಬಂದಿಯ ವಿವರ ನೀಡುವುದು. (ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಸಿಬ್ಬಂದಿಯ ವಿವರ ನೀಡುವುದು);

ಊ) ಈ ಸಂಸ್ಥೆಯಲ್ಲಿ ಕೊರತೆ ಇರುವ ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ಇನ್ನೆಷ್ಟು ದಿನದಲ್ಲಿ ತುಂಬಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಮಾಗಡಿ ಪಟ್ಟಣದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು 2007–08ನೇ ಸಾಲಿನಲ್ಲಿ 9 ವೃತ್ತಿಗಳೊಂದಿಗೆ ಪ್ರಾರಂಭಿಸ ಲಾಗಿದೆ. ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ಡೀಸಲ್ ಮ್ಯಕ್ಯಾನಿಕ್ ಇಎಂ, ಎಂಆರ್‌ಎಸಿ, ಐಟಿ ಮತ್ತು ಇಎಸ್‌ಎಂ, ಎಂಎಂವಿ ಮತ್ತು ಡ್ರೆಸ್ಸ್ ಮೇಕಿಂಗ್ ವೃತ್ತಿಗಳಲ್ಲಿ ಒಟ್ಟು 368 ಶಿಕ್ಷಣಾರ್ಥಿಗಳಿಗೆ ತರಬೇತಿ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಒಟ್ಟು 35 ವಿವಿಧ ಶ್ರೇಣಿಯ ಹುದ್ದೆಗಳನ್ನು ಸೃಜಿಸಲಾಗಿದೆ.

ಆ) ಇರುವುದಿಲ್ಲ.

ಇ) ಕೈಗಾರಿಕಾ ತರಬೇತಿ ಸಂಸ್ಥೆಯ ಸ್ವಂತ ಕಟ್ಟಡ ನಿರ್ಮಾಣದ ಸಲುವಾಗಿ ನಿವೇಶನ ಪಡೆಯಲು ಕಂದಾಯ ಇಲಾಖೆಯವರೊಡನೆ ವ್ಯವಹರಿಸಲಾಗುತ್ತಿದೆ.

ಈ) ಕಂದಾಯ ಇಲಾಖೆಯಿಂದ ನಿವೇಶನ ದೊರೆತಲ್ಲಿ ಅನುದಾನದ ಲಭ್ಯತೆ ಆಧರಿಸಿ ಕಟ್ಟಡ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಉ)

ಹುದ್ದೆಗಳು	ಮಂಜೂರಾಗಿರುವ ಸಿಬ್ಬಂದಿ ವಿವರ	ಭರ್ತಿಯಾಗಿರುವ ಹುದ್ದೆಗಳು	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವಿವರ	ಖಾಲಿ ಇರುವ ಹುದ್ದೆಗಳು
ಪ್ರಾಚಾರ್ಯರು	01	01	01	–
ಆಡಳಿತ ಅಧಿಕಾರಿ	01	01	01	–
ತ.ಅ	01	01	01	–
ಕಿ.ತ.ಅ	19	05	05	13
ಕಛೇರಿ ಅಧೀಕ್ಷಕರು	01	01	01	–
ಪ್ರ.ದ.ಸ.	02	02	02	–
ದ್ವಿ.ದ.ಸ.	01	–	–	01
ಬೆರಳಚ್ಚುಗಾರರು	01	01	01	–
ಕಾರ್ಯಗಾರ ಸಹಾಯಕರು	05	–	–	05
ಗ್ರೂಪ್ 'ಡಿ'	03	–	–	03

ಊ) ಲೋಕಸೇವಾ ಆಯೋಗದಿಂದ ಬೋಧಕ ಸಿಬ್ಬಂದಿ ಆಯ್ಕೆ ಮಾಡಿ ಪಟ್ಟಿ ನೀಡಿದ್ದು, ತಕ್ಷಣ ನೇಮಕಾತಿ ಮಾಡಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.